ಪ್ರೆಸೀಡೆಂಟರಿಂದಲೂ ಸದರೀ ಕಮ್ಮಿಷನರ್‌ಗಳಿಂದಲೂ, ನಿರ್ಣಯಿಸಲ್ಪಡತಕ್ಕ ವ್ರ್ಯ. ಬೇರೆ ಅಭಿಪ್ರಾಯ ಉಂಟಾದ ಸಂದರ್ಭದಲ್ಲಿ ಬಹಳ ಮಂದಿಯ ತಾತ್ಪರ್ಯದಿಂದ ನಿರ್ಣಯಿಸಲ್ಪಡತಕ್ಕವು. ಪ್ರೆಸೀಡೆಂಟರಿಗೆ ಅಂಗೀಕಾರ ಸ್ವಾತಂತ್ರ್ಯವಿರುತ್ತೆ.

ಹುಕ್ಕುಂ ಬನೋಜೀಬ
ಹೆಚ್. ವೈಲಿ, ಮೇಜರ್
ರೆಸೀಡೆಂಟರ ಅಸಿಸ್ಟೆಂಟ್.

ಮೈಸೂರು ರೆವಿನ್ಯೂ ಸರ್ವೇ ಮತ್ತು ಸೆಟಲ್‌ಮೆಂಟ್ ಇಲಾಖಾ..

ನಂ. 702. ತಾರೀಖು 6ನೇ ಫಿಬ್ರವರೀ 1884.

ಇದರಿಂದ ಪ್ರಕಟಿಸಲ್ಪಡುವದೇನಂದರೆ, ಮೈಸೂರು ಡಿಸ್ಟ್ರಿಕ್ಟು ಹೆಗ್ಗಡದೇವನಕೋಟೆ ತಾಲ್ಲೂಕಿನ ಸೆಟಲ್‌ಮೆಂಟ್‌ಯಾನೆ ತರಂ ಜಮಾಬಂದಿಯು, ಸ್ರ 1884ನೇ ಮಾಹೆ ಮಾರ್ಚಿ ಗುರ್ವೇ ತಾರೀಖು, ಯಾ ಆ ಸುಮಾರಿಗೆ ಪ್ರಾರಂಭಿಸೆಲ್ಪಡುತ್ತೆ.

ಜೆ. ಪಿ. ಗ್ಯಾಟ್,
ಸೂ॥ ಮೈಸೂರ್ ರೆ॥ ಸರ್ವೆ ಅಂಡ್ ಅಸೆಸ್‌ಮೆಂಟ್.

ಫಿನರ್ಷಿಯಲ್ ಇಲಾಖಾ.

1882ನೇ ಮೈಸೂರು ರೆವಿನ್ಯೂವೇ ಲೋ.

ತಾರೀಖು 6ನೇ ಜುಲೈ 1883.

ಲಂಡ್ರ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಪರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡ್ರ್‌ನಲ್ಲಿ, ಸ್ಟ್ಯಾಂಡ್‌ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನ್‌ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡ್ರ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಷ್ಟೇನ್‌ಮೆಂಟ್ ಯಾನೇ ಪರಾ ಬಗ್ಗೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಷ್ಟೇನ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡರ್ಸ್,
ಕಾಂಪ್ಟ್ರೋಲರ್.

ರಿಜಿಸ್ಟ್ರೇಷ್ ಇಲಾಖಾ.

ಕೋರ್ಟು ವಿಕ್ರಯದ ಸರ್‌ಟಿಫಿಕೇಟ್‌ಗಳ ಮೇಲೆ ಮಾಡಲ್ಪಡತಕ್ಕ ಇಂಡಾರ್ಸ್‌ಮೆಂಟ್ ನಮೂನೆ.

ಸ್ರ 1883–84ನೇ ಇಸವಿಯ ಸರ್ಕ್ಯುಲರ್ ಮಿಮೊರಾಂಡಂ ನಂಬರ 5—84.

ಮೈಸೂರು ಶೇಮೆಯಲ್ಲಿ ರೆಜಿಸ್ಟ್ರಿಂಗ್ ಆಫೀಸರ್‌ಗಳಿಗೆ.

ತಾರೀಖು 15ನೇ ಫಿಬ್ರವರೀ 1884.

ವಾಡಿಕೆಯನ್ನು ವಿಕರೂಪವಾಗಿ ಮಾಡುವ ಬಗ್ಗೆ, ರಿಜಿಸ್ಟ್ರೇಷ್ ಇನ್‌ಸ್ಪೆಕ್ಟರ್ ಜನರಲ್ಲವರು, ಸರ್‌ಟಿಫಿಕೇಟ್‌ದಾರರಿಂದ ರಿಜಿಸ್ಟ್ರೇಷ್ ಬಗ್ಗೆ ಹಾಜರುಮಾಡಲ್ಪಟ್ಟ ಕೋರ್ಟು ವಿಕ್ರಯದ ಸರ್‌ಟಿಫಿಕೇಟ್‌ಗಳ ಮೇಲೆ ಮಾಡಲ್ಪಡತಕ್ಕ ಈ ಕೆಳಗೆ ಕಂಡ ಇಂಡಾರ್ಸ್‌ಮೆಂಟ್ ನಮೂನೆಯನ್ನು ರಿಜಿಸ್ಟ್ರಿಂಗ್ ಆಫಿಸರ್‌ಗಳ ನಡವಳಿತದ ಬಗ್ಗೆ ವಿಧಿಸುತ್ತಾರೆ.

(ಹಾಜರಾತಿಯ ಇಂಡಾರ್ಸ್‌ಮೆಂಟ್ ತರುವಾಯ)

"ಇದರಡಿ ರುಜು ಮಾಡುವವರು ಈ ವಿಕ್ರಯದ ಸರ್‌ಟಿಫಿಕೇಟಿನ ಅನಾತೀ ವಿಷಯದಲ್ಲಿ ಸಮಾಧಾನಪಡುತ್ತಾರೆ"

(ರಿಜಿಸ್ಟ್ರಿಂಗ್ ಆಫಿಸರ್‌ಗಳ ರುಜು.)

ಹೆಚ್. ಹಡರ್ಸ್,
ರಿಜಿಸ್ಟ್ರೇಷ್ ಇನ್‌ಸ್ಪೆಕ್ಟರ್ ಜನರಲ್.